Famine Relief Works in Mandya District

80. Sri M. K. BOMME GOWDA (K. R. Pet).—

Will the Minister for Revenue be pleased to state :—

(*a*) the total amount spent for famine relief works in Mandya District and K. R. Pet Taluk in particular during the recent drought situation in the State ;

(*b*) the total Amount allotted to each taluk in Mandya District for these works ?

Sri H. V. KOUJALGI (Minister for Revenue).—

(*a*) An amount of Rs. 17,03,476-77 has been spent in Mandya District up to 30th November 1968, out of which an amount of Rs. 2,35,451-25 has been spent in K. R. Pet Taluk.

(*b*).—

	Name of Taluk			Amount allotted as on 30-11-1968
1.	B.D.O.' Mandya	...	...	2,15,000-00
2.	B.D.O.' Maddur	...	...	3,06,000-00
3.	B.D.O.' Malavalli	...	...	2,10,000-00
4.	B.D.O.' K. R. Pet	...	...	2,50,000-00
5.	B.D.O.' Nagamangala	...	...	5,25,000-00
6.	B.D.O.' Pandavapura	...	...	1,44,000-00
7.	B.D.O.' Srirangapatna	...	...	1,30,000-00
8.	E.E., Mandya Dn.	...	...	1,00,000-00
9.	R.F.Os' Mandya and Nagamangala		...	20,000-00
		Total	...	19,00,000-00

ಶ್ರೀ ಎಂ. ಕೆ. ಬೊಮ್ಮೇಗೌಡ.—ಮಂಡ್ಯಾ ಜಿಲ್ಲೆಗೆ ಫ್ಯಾಮಿನ್ ರೀಲೀಫ್ ಕಾಮಗಾರಿಗಳಿಗಾಗಿ 19 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಇದರಲ್ಲಿ ಮಂಡ್ಯಜಿಲ್ಲೆಯಲ್ಲಿ ಬಹಳ ಬರಾಗಿ ಫಾಮಿನ್ ಪರಿಹಕ್ಕೆ ಕೃಷ್ಣರಾಜಪೇಟೆಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ಮತ್ತು ನಾಗಮಂಗಲ ತಾಲ್ಲೂಕಿಗೆ 5,25,000 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಬಾಕಿ ಕಡೆ ಇನ್ನೂ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಕಾರಣವೇನು ?

† ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಹೇಳುವ ಹಾಗೆ ಆಗಿಲ್ಲ. ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ಸ್ಥಾನಿಕ ಸದಸ್ಯರುಗಳು ಎಷ್ಟೆಷ್ಟು ಖರ್ಚು ಮಾಡಬೇಕೆಂದು ಕೇಳಿದ್ದಾರೆಯೋ ಆ ಪ್ರಕಾರ ಕೆಲಸಗಳನ್ನು ಕೈಗೊಂಡಿದೆ. ನಾಗಮಂಗಲ ತೀರ ಫ್ಯಾಮಿನ್ ಏರಿಯಾ ಆಗಿಪ್ಪುದರಿಂದ ಅಲ್ಲಿಗೆ ಹೆಚ್ಚು ಖರ್ಚು ಮಾಡಲಾಗಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಎಕ್ಸ್‌ಪರ್ಟ್ ಕಮಿಟಿಯವರು ವಿಶ್ವೇಶ್ವರಯ್ಯ ನಾಲಾ ಏರಿಯಾದಲ್ಲಿ ವಿಷಯವನ್ನು ಸಂಗ್ರಹಿಸಲು ಹೋದಾಗ ಅಲ್ಲಿನ ಸಾರ್ವಜನಿಕರು ಮತ್ತು ಮುಖಂಡರು ವಿರೋಧವನ್ನು ವ್ಯಕ್ತಪಡಿಸಿರುವುದನ್ನು ಸರ್ಕಾರದವರು ಮನಗಂಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ.

ಶ್ರೀ ಎಂ. ಪುಂಜೇಗೌಡ.—ಈ ಸಮಿತಿಗೆ ಮೇಜರ್ ಇರಿಗೇಶನ್ ಚೀಫ್ ಇಂಜಿನಿಯರ್ ಚೇರ್‌ಮೇನ್ ಎಂದು ಹೇಳುತ್ತಾರೆ, ಅದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ, ಅವರು ಕನ್ವೀನರ್ ಆಫ್ ದಿ ಕಮಿಟಿ.

ಶ್ರೀ ಎಂ. ಬಸವರಾಜು.—ಮೈಸೂರು ತಾಲ್ಲೂಕಿನ ಜನರ ಹಿತದೃಷ್ಟಿಯಿಂದ ಈ ನಾಲೆಯನ್ನು ನಿರ್ಮಿಸುವುದರಿಂದ ತೊಂದರೆಗೊಳಗಾಗತಕ್ಕ ಜನರಿಗೆ ತೊಂದರೆಯಾಗದ ಹಾಗೆ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು—ಯಾವ ನದಿಗೂ ಎರಡು ದಂಡೆಗಳಿರುತ್ತವೆ. ವಿಶ್ವೇಶ್ವರಯ್ಯ ನಾಲೆ ಎಡದಂಡೆಯಲ್ಲದೆ· ಬಲದಂಡೆಯಲ್ಲ ಹೆಚ್ಚಿಗೆ ನೀರಾವರಿಗೆ ಅನುಕೂಲವಿಲ್ಲ. ಎಕ್ಸ್‌ಪರ್ಟ್ ಕಮಿಟಿ ರಿಪೋರ್ಟು ಬಂದಾಗ ವರುಣಾ ನಾಲೆಗೆ 75 ಪರ್ಸೆಂಟ್ ಡಿಪೆಂಡೆಬಲಿಟಿ ನೀರು ಇದೆ ಎಂದು ಹೇಳಿದ್ದಾರೆ, ನಾವು ರೆಕ್ಕೆ ಹಾಕಿರುವಂತೆ, ಕಬಿನಿ ಪ್ರೊಜೆಕ್ಟ್ ಕಟ್ಟಿದ ಮೇಲೆ, ಕೆ.ಆರ್.ಎಸ್. ನಿಂದ ಕಬಿನಿಗೆ ರಿಲೀಸ್ ಮಾಡಿ ಬಲದಂಡೆಗೆ ಅನುಕೂಲ ಮಾಡಬೇಕೆಂದು ಇದನ್ನು ಪ್ರಾರಂಭ ಮಾಡಿದ್ದೇವೆ.

ಶ್ರೀ ಎನ್. ಎ. ಜನ್ನೇಗೌಡ.—ವರುಣಾ ನಾಲೆ ತೆಗೆದರೆ, ವಿಶ್ವೇಶ್ವರಯ್ಯ ನಾಲೆಯ ಕೆಳಗಿರ ತಕ್ಕಂತಹವರ ಪ್ರಿಸ್ಕ್ರಿಪ್ಟಿವ್ ರೈಟ್ಸಿಗೆ ಧಕ್ಕೆ ಬರುವುದಿಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಬರುವುದಿಲ್ಲವೆಂದು ಖಂಡಿತವಾಗಿ ಹೇಳಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಶ್ವೇಶ್ವರಯ್ಯ ನಾಲೆಯಲ್ಲಿ ಜನರಿಗೆ ಕೆಲವು ಕಡೆ ನೀರು ಬಾರದಿರುವುದಕ್ಕೆ ಬೇರೆ ಕಾರಣಗಳಿವೆ ಎಂದು ಹೇಳಿದ್ದೀರಿ. ಆ ಬೇರೆ ಕಾರಣಗಳು ಏನು ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಬೇರೆ ಕಾರಣಗಳೆಂದರೆ, ಅನ್‌ಆಥೋರೈಸ್ಡ್ ಕಲ್ಟಿವೇಶನ್ ಸಾಕಷ್ಟು ಪ್ರಮಾಣದಲ್ಲಿ ಆಗುತ್ತಾ ಇದೆ. ನೀರನ್ನು ಮೇಲ್ಗಡೆ ಸರಿಯಾಗಿ ಉಪಯೋಗ ಮಾಡದೆ, ವೇಸ್ಟೇಜ್ ಹೆಚ್ಚಾಗುತ್ತದೆ, ಮತ್ತು ಇವಾಪರೇಶನಿಂದ ಲಾಸ್ ಆಗುತ್ತದೆ. ಕೇಪೇಸಿಟಿ ಇದರಿಂದ ಕಡಿಮೆಯಾಗಿದೆ. ಇವನ್ನೆಲ್ಲಾ ರೆಸ್ಟೋರ್ ಮಾಡಿದರೆ ಕಷ್ಟವಾಗುವುದಿಲ್ಲ.

ಶ್ರೀ ಎಂ. ಪುಟ್ಟೇಗೌಡ.—ಯಾವ ಚೀಫ್ ಇಂಜಿನಿಯರ್ ವರುಣಾ ನಾಲೆ ತೋಡುವುದರಿಂದ ತೊಂದರೆಯಾಗುವುದಿಲ್ಲವೆಂದು ಹೇಳಿದ್ದಾರೋ, ಅದೇ ಚೀಫ್ ಇಂಜಿನಿಯರನ್ನು ಸೇರಿಸಿ ಸಮಿತಿ ಮಾಡಿ ರಿಪೋರ್ಟು ಪಡೆಯುವುದರಿಂದ ನಿಷ್ಪಕ್ಷಪಾತವಾದ ಅಭಿಪ್ರಾಯ ಸಿಗುವುದಿಲ್ಲವೆಂದು ಊಹಿಸಬಹುದೇ?

ಶ್ರೀ ವೀರೇಂದ್ರ ಪಾಟೀಲ್.—ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಇದರಲ್ಲಿ ಚೀಫ್ ಇಂಜಿನಿಯರ್ ಒಬ್ಬರೇ ಅಲ್ಲ. ಇದರಲ್ಲಿ ಚೀಫ್ ಇಂಜಿನಿಯರ್ ಇನ್‌ವೆಸ್ಟಿಗೇಶನ್, ಚೀಫ್ ಇಂಜಿನಿಯರ್ ಇರಿಗೇಶನ್ ಚೀಫ್ ಇಂಜಿನಿಯರ್ ಜನರಲ್ ರಿಟೈರ್ಡ್ ಚೀಫ್ ಇಂಜಿನಿಯರ್ ಆರ್. ಎಲ್. ರಾಜು ಮತ್ತು ಜಾಯಿಂಟ್ ಸೆಕ್ರೆಟರಿ ಇದ್ದಾರೆ. ಇದರಲ್ಲಿ ಯಾರಿಗೂ ಸಂಬಂಧವಿಲ್ಲ. ಅವರೆಲ್ಲಾ ಯುನ್ಯೇನಿಮಸ್ ರಿಪೋರ್ಟು ಕೊಟ್ಟಿದ್ದಾರೆ. ತಾಂತ್ರಿಕ ರಿಪೋರ್ಟು ಮೇಲೆ ಕಾಮೆಂಟ್ಸ್ ಮಾಡುವುದು ಕಷ್ಟ.

ಶ್ರೀ ಎಸ್. ಶಿವಪ್ಪ.—ಈಗ ಕೆ.ಆರ್. ಸಾಗರದಲ್ಲಿ 5 ವರ್ಷದಲ್ಲಿ ಮೂರು ವರ್ಷವಾದರೂ ಕೂಡ ಕೆರೆಯಲ್ಲಿ ನೀರಿಲ್ಲದೆ ತೊಂದರೆಯಾಗಿದೆ. ಈಗ ಮೂರನೇ ಚಾನಲ್ ತೆಗೆದು, ಕ್ಯಾಪ್ ಪ್ಯಾಟರ್ನ್ ಮಾಡಿ, ಈಗಿರತಕ್ಕ ಕಬ್ಬು, ಬತ್ತದ ಬೆಳೆಗೆ ನರ್ಕಾರದವರು ಹಾನಿಮಾಡಬೇಕೆಂಬ ಉದ್ದೇಶವೇ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ. ಅದಕ್ಕೆ ಪ್ರಯಾರಿಟಿ ಕೊಟ್ಟು ಧಕ್ಕೆ ಬರದಂತೆ ನೀರು ಕೊಡಬೇಕೆಂದು ಮಾಡಿಕೊಂಡಿದ್ದಾರೆ. 75 ಪರ್ಸೆಂಟ್ ಡಿಪೆಂಡೇಬಲಿಟಿ ಮೇಲೆ ವರುಣಾ ನಾಲೆಗೆ ಬೇಕಾದಷ್ಟು ನೀರು ಇದೆ. ಇದು ತಾಂತ್ರಿಕ ವರದಿಯಲ್ಲಿ ಸ್ಪಷ್ಟವಾಗಿದೆ.

1-30 P.M.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೃಷ್ಣರಾಜಪೇಟೆಗೆ ಕಡಿಮೆ ಹಣವನ್ನು ಖರ್ಚು ಮಾಡಿರ ಬೇಕಾದರೆ ಅಲ್ಲಿ ನಾನ್-ಕಾಂಗ್ರೆಸ್ ಎಂ.ಎಲ್.ಎ. ಇದ್ದಾರೆ ಎಂಬ ಭಾವನೆಯಿಂದಲೇ?

ಶ್ರೀ ಎಚ್. ವಿ. ಕೌಜಲಗಿ.—ಹಾಗೇನಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಒಟ್ಟು 19 ಲಕ್ಷ ರೂಪಾಯಿಗಳಲ್ಲಿ ಇತ್ತೀಚೆಗೆ ನಡೆದ ತಾಲ್ಲೂಕ್ ಬೋರ್ಡ್ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ಸಿನ ಸಲುವಾಗಿ ಎಷ್ಟು ಹಣ ಖರ್ಚಾಯಿತು?

ಶ್ರೀ ಎಚ್. ವಿ. ಕೌಜಲಗಿ.—ವಿವರಗಳನ್ನು ಇಲ್ಲಿ ಈಗ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಸದಸ್ಯರು ತಾಲ್ಲೂಕ್ ಬೋರ್ಡ್ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್‌ಗಾಗಿ ಎಷ್ಟು ಹಣ ಖರ್ಚಾಯಿತು ಎಂದು ಅಸ್‌ಜಾರಿಟಬಲ್ ಆಗಿ ಒಂದು ಪ್ರಶ್ನೆಯನ್ನು ಕೇಳಿದರು. ಈ ಹಣವನ್ನು ತಾಲ್ಲೂಕ್ ಬೋರ್ಡ್ ಚುನಾವಣೆಯ ನಲುವಾಗಿ ಖರ್ಚು ಮಾಡಲಿಲ್ಲ. ಎರ್ಲೆಲ್ಲಿ ಬರಗಾಲ ಇದೆಯೋ ಅದನ್ನು ನೋಡಿಕೊಂಡು ಹಣ ಖರ್ಚು ಮಾಡಲು ತಾಲ್ಲೂಕ್ ಮಟ್ಟದಲ್ಲಿ ಒಂದೊಂದು ಕಮಿಟಿಯನ್ನು ಮಾಡಿ, ಆ ಕಮಿಟಿಯವರ ತೀರ್ಮಾನದ ಪ್ರಕಾರ ಹಣವನ್ನು ಬರಗಾಲದ ಪ್ರಯುಕ್ತ ಖರ್ಚು ಮಾಡಲಾಗಿದೆಯೇ ಹೊರತು ತಾಲ್ಲೂಕ್ ಬೋರ್ಡ್ ಚುನಾವಣೆಯ ನಲುವಾಗಿ ಖರ್ಚು ಮಾಡಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಸಂಬಂಧಪಟ್ಟ ಮಂತ್ರಿಗಳು ಈಗೊಗಲೇ ಉತ್ತರ ಕೊಟ್ಟಿದ್ದರೂ ಸಹ ಮಾನ್ಯ ಮುಖ್ಯ ಮಂತ್ರಿಗಳು ಮತ್ತೆ ಉತ್ತರ ಕೊಡಬಹುದೆ ?

ಅಧ್ಯಕ್ಷರು.—ಮುಖ್ಯ ಮಂತ್ರಿಗಳಿಗೆ ಮತ್ತೆ ಉತ್ತರ ಕೊಡಲು ಅಧಿಕಾರವಿದೆ.

ಶ್ರೀ ಎಚ್. ವಿ. ಕಾಜಲಗಿ.—ನನಗೆ ಪ್ರಶ್ನೆಯ ಮೊದಲನೆಯ ಭಾಗ ಕೇಳಿಸಿತು ಕೊನೇ ಭಾಗ ಮಾತ್ರ ಕೇಳಿಸಲಿಲ್ಲ. ಅದಕ್ಕಾಗಿ ವಿಷಾದಿಸುತ್ತೇನೆ.

Bridge across Krishna River

140. Sri SADASHIVAPPA PATIL (Deodurg).—

Will the Minister for Public Works be pleased to state :—

(*a*) whether Government have accorded sanction for the construction of a bridge across the Krishna river between Deodurg and Shahpur ;

(*b*) if so, when the construction work will be taken up ?

Sri K. LAKKAPPA (Minister for Public Works).—

(*a*) Yes.

(*b*) As early as possible.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಸೇತುವೆಯನ್ನು ನಿರ್ಮಿಸುವ ಬಗ್ಗೆ ಸರ್ಕಾರದ ಮಂಜೂರಾತಿ ಯಾವಾಗ ಆಯಿತು ಎಂಬುದನ್ನು ಹೇಳುತ್ತೀರಾ ?

†ಶ್ರೀ ಕೆ. ಲಕ್ಕಪ್ಪ.—30-5-1968ರಲ್ಲಿ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಯಿತು. ಜೂನ್ 1968ರಲ್ಲಿ ಟೆಕ್ನಿಕಲ್ ಸ್ಯಾಂಕ್ಷನ್ ಆಯಿತು. ಈಗ ಟೆಂಡರ್ ಕರೆಯಲಾಗಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—(ಅ)ಗೆ ಉತ್ತರವಾಗಿ ಸಾಧ್ಯವಾದಷ್ಟು ಬೇಗನೆ ಎಂದು ಹೇಳಿದ್ದೀರಿ, 1968ನೇ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಸೇತುವೆ ಕಟ್ಟುವ ಬಗ್ಗೆ ಅಡಿಗಲ್ಲನ್ನು ಹಾಕಿದರು. 1967-68 ಮತ್ತು 1968-69ನೇ ಸಾಲುಗಳಲ್ಲಿ ಈ ಬಗ್ಗೆ ಇಟ್ಟಿದ್ದ 10 ಲಕ್ಷ ರೂಪಾಯಿಗಳನ್ನು ಇನ್ನೂ ಖರ್ಚು ಮಾಡಿಲ್ಲ. ಇದಕ್ಕೆ ಸರ್ಕಾರವೇ ಕಾರಣವೋ ಅಥವಾ ಸ್ಥಳೀಯ ಪ್ರತಿನಿಧಿಗಳು ಕಾರಣರೋ ?

ಶ್ರೀ ಕೆ. ಲಕ್ಕಪ್ಪ.—ಟೆಂಡರ್ ಕರೆಯುವುದರಲ್ಲಿ ಸ್ವಲ್ಪ ವಿಳಂಬವಾಯಿತು. ಈಗ ಟೆಂಡರ್ ಕರೆದು ಅಪ್ರೂವ್ ಮಾಡುವ ಸ್ಟೇಜಿನಲ್ಲಿದೆ. ಅಪ್ರೂವ್ ಆದ ತಕ್ಷಣ ಈ ಸಾಲಿನ 5 ಲಕ್ಷ ರೂಪಾಯಿಗಳನ್ನು ಸಹ ಆಳವಡಿಸಿಕೊಂಡು ತ್ವರಿತವಾಗಿ ಖರ್ಚು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ಈ ಕೆಲಸದ ಎಸ್ಟಿಮೇಟ್ ಕಾಸ್ಟ್ ಎಷ್ಟು ಮತ್ತು ಎಷ್ಟು ವರ್ಷಗಳಲ್ಲಿ ಈ ಕೆಲಸ ಮುಗಿಸಬೇಕೆಂದಿದ್ದೀರಿ ?

ಶ್ರೀ ಕೆ. ಲಕ್ಕಪ್ಪ.—ಒಟ್ಟು ಎಸ್ಟಿಮೇಟ್ ಕಾಸ್ಟ್ ಸೆಂಟ್ರಲ್ ರೋಡ್ ಫಂಡ್ ಪ್ರಕಾರ 27 ಲಕ್ಷ ರೂಪಾಯಿಗಳೆಂದು ಆಂದಾಜಾಗಿತ್ತು. ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಮಾಡುವ ಕಾಲಕ್ಕೆ 27 ಲಕ್ಷ